## ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

**OFFICE OF THE DEPUTY TAHASILDAR, THAMBRAHALLI-583224**

ಎ.ವಿಲೇ.ನಂ.ಕಂ.ಪಹಣಿ.ವಿವಾದ/41/2015-16 ದಿನಾಂಕ: 05 .05.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

**ವಾದಿ (ಶ್ರೀ/ಶ್ರೀಮತಿ)**

1] ಮೈನಳ್ಳಿ ಬಾಳಮ್ಮ ತಂದೆ ಲೇಟ್ ಮೈನಳ್ಳಿ ಶಿವಪ್ಪ 2] ಎಂ ಬಸವರೆಟ್ಟಿ ತಂದೆ ಲೇಟ್ ಮೈನಳ್ಳಿ ಶಿವಪ್ಪ ವಾಸ ಶೀಗೇನಹಳ್ಳಿ ಗ್ರಾಮ ಹ.ಬೊ.ಹಳ್ಳಿ ತಾಲೂಕು.

**ಪ್ರತಿವಾದಿ (ಶ್ರೀ/ಶ್ರೀಮತಿ)**

1] ದೇವರೆಡ್ಡಿ ತಂದೆ ಹನುಮರೆಡ್ಡಿ ವಾಸ ತಂಬ್ರಹಳ್ಳಿ ಗ್ರಾಮ ಹ.ಬೊ.ಹಳ್ಳಿ ತಾಲೂಕು.
2] ಕಂದಾಯ ನಿರೀಕ್ಷಕರು ತಂಬ್ರಹಳ್ಳಿ

**ವ್ಯಾಜ್ಯದ ಜಮೀನಿನ ವಿವರ**

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ಶೀಗೇನಹಳ್ಳಿ | 121/ಬಿ/1 | 0.57 |

*****

ಉಪ ತಹಶೀಲ್ದಾರರ ಕಛೇರಿ ತಂಬ್ರಹಳ್ಳಿ Office of the Deputy Tahasildar

**ಪೀಠಿಕೆ:-**

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಶೀಗೇನಹಳ್ಳಿ ಗ್ರಾಮದ ಸ.ನಂ. 121/ಬಿ/1 ವಿಸ್ತೀರ್ಣ 0.57 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಪಾಲು ವಿಭಾಗ ಪತ್ರದ ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್.8/2015-16 ರಲ್ಲಿ 1ನೇ ಪ್ರತಿವಾದಿಗಳಿಂದ ತಕರಾರು ಬಂದಿರುವುದರಿಂದ ಹಾಗೂ ದಾಖಲೆಗಳಲ್ಲಿ ವ್ಯತ್ಯಾಸ ಕಂಡುಬಂದಿರುವುದರಿಂದ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:25.02.2016 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಪ್ರಕಾರ ವ್ಯಾಜ್ಯದ ಜಮೀನು ವಾದಿಗಳ ಸಹೋದರನಾದ ಹನುಮಂತಪ್ಪ ಇವರ ಜಮೀನಾಗಿದ್ದು ಸದರಿಯವರು ದಿನಾಂಕ:13.05.2010 ರಂದು ಮರಣ ಹೊಂದಿದ್ದು ಸದರಿಯವರ ಪತ್ನಿಯಾದ ಶ್ರೀಮತಿ ಪಕ್ಕೀರಮ್ಮ ಇವರೂ ಸಹ ಮರಣ ಹೊಂದಿದ್ದು ಸದರಿಯವರ ವಂಶ ವೃಕ್ಷ ಪ್ರಮಾಣ ಪತ್ರದ ಮೇರೆಗೆ ವಾದಿಗಳಾದ ಎಂ.ಬಾಳಮ್ಮ ತಂದೆ ಲೇಟ್ ಮೈನಳ್ಳಿ ಶಿವಪ್ಪ ಮತ್ತು ಎಂ ಬಸವರೆಡ್ಡಿ ತಂದೆ ಲೇಟ್ ಮೈನಳ್ಳಿ ಶಿವಪ್ಪ ಇವರುಗಳು ನೇರ ವಾರಸುದಾರರಾಗಿರುವುದರಿಂದ ಸದರಿಯವರ ಹೆಸರಿಗೆ ಜಂಟಿಯಾಗಿ ಖಾತೆ ಮಾಡಿಕೊಡುವಂತೆ ಕೋರಿರುತ್ತಾರೆ.

1ನೇ ಪ್ರತಿವಾಗಳು ಪ್ರಸ್ತುತ ಹಕ್ಕುಬದಲಾವಣೆಗೆ ದಿನಾಂಕ:21.01.2016 ರಂದು ಲಿಖಿತ ತಕರಾರರನ್ನು ಸಲ್ಲಿಸಿರುತ್ತಾರೆ, ಸದರಿಯವರ ಪ್ರಕಾರ ವ್ಯಾಜ್ಯದ ಜಮೀನು ತನ್ನ ತಂದೆಯವರ ಹೆಸರಿನಲ್ಲಿದ್ದು ವಾದಿಗಳಾದ ತನ್ನ ಚಿಕ್ಕಪ್ಪನವರು ಕಾನೂನು ಬಾಹೀರವಾಗಿ ಖಾತೆ ಮಾಡಿಸಿಕೊಳ್ಳಲು ಮನವಿ ಸಲ್ಲಿಸಿದ್ದು ಸದರಿ ಮನವಿಯನ್ನು ರದ್ದುಗೊಳಿಸುವಂತೆ ಕೋರಿರುತ್ತಾರೆ.

ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ವ್ಯಾಜ್ಯದ ಜಮೀನಿನ ಪಹಣಿ ಪತ್ರಿಕೆ ಹಾಗೂ ಮರಣ ಪ್ರಮಾಣ ಪತ್ರದಲ್ಲಿ ವ್ಯತ್ಯಾಸ ಕಂಡುಬಂದಿರುವುದರಿಂದ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಈ ಕಛೇರಿಗೆ ವರದಿ ಸಲ್ಲಿಸಿರುತ್ತಾರೆ.

ಪ್ರಸ್ತುತ ಪ್ರಕರಣದ ವಾದಿ, ಪ್ರತಿವಾದಿಗಳು ಮಂಡಿಸಿದ ವಾದ ಪ್ರತಿವಾದವನ್ನು ಆಲಿಸಲಾಗಿ ಹಾಗೂ ವ್ಯಾಜ್ಯದ ಜಮೀನುಗಳಿಗೆ ಸಂಬಂಧಿಸಿದಂತೆ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.

1. ವ್ಯಾಜ್ಯದ ಜಮೀನಿನ ಪಹಣಿ ಪತ್ರಿಕೆಯನ್ನು ಪರಿಶೀಲಿಸಲಾಗಿ ಬಿಸ್ನಳ್ಳಿ ಹನ್ಮಪ್ಪ ತಂದೆ ಶಿವಪ್ಪ ಶೀಗೇಹಳ್ಳಿ ಎಂದು ಪಟ್ಟಾದಾರರ ಹೆಸರು ನಮೂದು ಇರುವುದು ಕಂಡುಬಂದಿರುತ್ತದೆ.
2. ಹಕ್ಕುಬದಲಾವಣೆಗಾಗಿ ಸಲ್ಲಿಸಿದ ಮನವಿಯನ್ನು ಹಾಗೂ ವಂಶವೃಕ್ಷ ಪ್ರಮಾಣ ಪತ್ರವನ್ನು ಪರಿಶೀಲಿಸಲಾಗಿ ಮನವಿದಾರರ ಸಹೋದರನ ಹೆಸರು ಮೈನಳಿ ಹನುಮಂತಪ್ಪ ತಂದೆ ಮೈನಳ್ಳಿ ಶಿವಪ್ಪ ಎಂದು ನಮೂದು ಇರುವುದು ಕಂಡುಬಂದಿರುತದೆ.
3. ವಾದಿಗಳು ಹಾಜರುಪಡಿಸಿದ ಮರಣ ಪ್ರಮಾಣ ಪತ್ರವನ್ನು ಪರಿಶೀಲಿಸಲಾಗಿ ಮೈನಳ್ಳಿ ಹನುಮಂತಪ್ಪ ಇವರು ದಿನಾಂಕ:13.05.2010 ರಂದು ಮರಣ ಹೊಂದಿರುವುದಾಗಿ ಕಂಡುಬಂದಿರುತ್ತದೆ. ಪ್ರಸ್ತುತ ವ್ಯಾಜ್ಯದ ಜಮೀನಿನ ಪಟ್ಟಾದಾರರ ಹೆಸರಿಗೂ ಮರಣ ಪ್ರಮಾಣ ಪತ್ರದಲ್ಲಿರುವ ನಮೂದಿಗೂ ವ್ಯತ್ಯಾಸವಿರುವುದು ಕಂಡುಬಂದಿರುತ್ತದೆ.
4. ತಕರಾರುದಾರರು ಸಲ್ಲಿಸಿದ ಲಿಖಿತ ಪ್ರತಿಯನ್ನು ಪರಿಶೀಲಿಸಲಾಗಿ ಪ್ರಸ್ತುತ ಜಮೀನಿನ ವಾರಸತ್ವದ ಬಗ್ಗೆ ವಿವಾದಾಸ್ಪದವಾಗಿರುವುದು ಮೇಲ್ನೋಟಕ್ಕೆ ಕಂಡುಂದಿರುತ್ತದೆ.

ಮೇಲಿನ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಪ್ರಸ್ತುತ ಜಮೀನಿನ ಪಹಣಿ ಪತ್ರಿಕೆಯಲ್ಲಿನ ದಾಖಲೆಗಳಿಗೂ ಹಾಗೂ ಹಕ್ಕುಬದಲಾವಣೆಗೆ ಸಲ್ಲಿಸಿದ ಮರಣ ಪ್ರಮಾಣ ಪತ್ರ, ವಂಶವೃಕ್ಷ ಹಾಗೂ ಇತರೆ ದಾಖಲೆಗಳಲ್ಲಿನ ನಮೂದುಗಳಿಗೂ ವ್ಯತ್ಯಾಸ ಕಂಡುಬಂದಿರುವುದರಿಂದ ಅಲ್ಲದೇ ವಾರಸತ್ವದಲ್ಲಿ ವಿವಾದಾಸ್ಪದವಿರುವುದರಿಂದ ಪ್ರಸ್ತುತ ಪ್ರಕರಣವು ಸಿವಿಲ್ ಸ್ವರೂಪವಾಗಿರುವುದರಿಂದ ಉಭಯ ಪಕ್ಷಕಾರರು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಸೂಚಿಸಬಹುದಾಗಿರುವುದರಿಂದ ಈ ಕೆಳಕಂಡಂತೆ ಆದೇಶ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಶೀಗೇನಹಳ್ಳಿ ಗ್ರಾಮದ ಸ.ನಂ. 121/ಬಿ/1 ವಿಸ್ತೀರ್ಣ 0.57 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಉಭಯರು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: ೦೬.05.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ನಾಡ ಕಛೇರಿ, ತಂಬ್ರಹಳ್ಳಿ.

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.